International Journal of Kannada Research
www.kannadajournal.com

**ISSN: 2454–5813**
IJKR 2018; 4(2): 117-120
© 2018 IJKR
www.kannadajournal.com
Received: 21-02-2018
Accepted: 22-03-2018

**ಶ್ರೀ.ವಾಯ್. ಎ. ಜಕ್ಕಣ್ಣವರ**
ಸಂಶೋಧನಾರ್ಥಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ್

**Correspondence**
**ಶ್ರೀ.ವಾಯ್. ಎ. ಜಕ್ಕಣ್ಣವರ**
ಸಂಶೋಧನಾರ್ಥಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ

# ಕನ್ನಡ ಸಾಹಿತ್ಯದ ಸಂಶೋಧನೆಯ ಸವಾಲುಗಳು

**ಶ್ರೀ.ವಾಯ್. ಎ. ಜಕ್ಕಣ್ಣವರ**

‘ಸಂಶೋಧನೆ’ ಎಂಬ ಪದವು ಇಂಗ್ಲೀಷಿನ Research ಎಂಬ ಇಂಗ್ಲೀಷ ಪದದಿಂದ ಬಂದಿದೆ. ಖಜ ಎಂದರೆ ಚನ್ನಾಗಿ search ಎಂಬುದಕ್ಕೆ ಹುಡುಕು ಎಂದು ಅರ್ಥ ಆದ್ದರಿಂದ Research ಎಂಬುದು ಚನ್ನಾಗಿ ಹುಡುಕು ಸರಿಯಾಗಿ ಹುಡುಕು ಎಂಬ ಅರ್ಥವನ್ನು ಪ್ರತಿನಿಧಿಸುತ್ತದೆ. ‘ಸಂಶೋಧನೆ’ ಎಂಬ ಪದ ನಮ್ಮಲ್ಲಿ ಮೊದಲಿನಿಂದಲೂ ಬಳಕೆಯಲ್ಲಿತ್ತು. ಆದರೆ ಇಂಗ್ಲಿಷನ ಪ್ರಭಾವದಿಂದಾಗಿ ಒಂದು ಶೈಕ್ಷಣಿಕ ಶಿಸ್ತನ್ನು ಪ್ರತಿಪಾದಿಸುವ ಪ್ರತಿನಿಧಿಸುವ ಪದವಾಗಿ, ಶಾಸ್ತ್ರವಾಗಿ, ಸಂಶೋಧನಾ ಶಾಸ್ತವಾಗಿ ಬೆಳೆದು ನಿಂತಿದೆ. ಸಂಶೋಧನೆ ಎಂಬ ಪದವು ಇಂಗ್ಲೀಷದಿಂದ ಬಂದ ಕಾರಣದಿಂದ ನಿರ್ದಿಷ್ಟ ವಾಗಿ ಸಂಶೋಧನೆ ಎಂದರೆ ಏನು ಎಂಬುದನ್ನು ವ್ಯಾಖ್ಯಾನಿಸುವುದು ನಿಖರವಾಗಿ ಯಾವುದು ಸಂಶೋಧನೆ ಎನ್ನುವುದರಲ್ಲಿ ಹಲವು ಗೊಂದಲಗಳಿಂದಾಗಿ ಗೂಡಾರ್ಥದಿಂದ ಕೂಡಿದೆ. ಆದ್ದರಿಂದ ಇನ್‌ವೆನ್‌ಶನ್, ಡಿಸ್ಕವರಿ, ರಿಸರ್ಚ ಮೊದಲಾದ ವಿಭಿನ್ನ ಅರ್ಥದ ಈ ಇಂಗ್ಲೀಷ ಪದಗಳಿಗೆ ಪರ್ಯಾಯವಾಗಿ ಕನ್ನಡದಲ್ಲಿ ಸಂಶೋಧನೆ ಎಂಬ ಒಂದೇ ಪದವನ್ನು ಬಳಲಾಗುತ್ತಿದೆ. ಈ ಪದಗಳು ನಿರ್ದಿಷ್ಟ ಅರ್ಥವನ್ನು ಅವುಗಳ ಪರಸ್ಪರ ಸಂಬಂಧ ವ್ಯತ್ಯಾಸಗಳನ್ನು ಸ್ಪಷ್ಟಪಡಿಸುತ್ತ ಅವುಗಳಿಗೆ ಸಂವಾದಿಯಾದ ಹೊಸ ಪದಗಳನ್ನು ಕನ್ನಡದಲ್ಲಿ ಸೃಷ್ಟಿಸುವುದು ಅವಶ್ಯಕವಾಗಿದೆ. discover ಎಂಬ ಪದವು ಞ ಎಂಬ ನಿಷೇಧಾರ್ಥಕ ಪ್ರತ್ಯಯ cover ಎಂದರೆ ಆವರಣ ಎಂಬ ಅರ್ಥವಿದ್ದು, discover ಎಂಬುದಕ್ಕೆ ಆವರಿಸಿದ ತೆರೆ ಸರಿಸು, ಸತ್ಯವನ್ನು ಅನಾವರಣಗೊಳಿಸುವ ಎಂಬ ಅರ್ಥವಿದೆ. ಅಂದರೆ ಇದ್ದರೂ ಕಣ್ಮರೆಯಾದದನ್ನು ಹುಡುಕುವುದು ಉದಾ: ಹಲ್ಮಿಡಿ ಶಾಸನದ ಶೋಧ, ಅಮೇರಿಕಾ ದೇಶದ ಶೋಧ

invention ಎಂಬ ಪದವು invent ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ ಇದಕ್ಕೆ ಸೃಷ್ಟಸು ನಿರ್ಮಿಸುವುದು ಎಂದು ಅರ್ಥವಿದೆ. invention ಎಂಬುದಕ್ಕೆ ಹೊಸ ಸೃಷ್ಟಿ ಅಥವಾ ಹೊಸ ನಿರ್ಮಿತಿ ಎಂದು ಅರ್ಥವಿದೆ. ಇದಕ್ಕೆ ಉದಾ: ರೈಟ್ ಸಹೋದರರು ವಿಮಾನ ಶೋಧನ ಹೀಗೆ ಇದು ವಿಜ್ಞಾನ ಕ್ಷೇತ್ರದಲ್ಲಿ ನಡೆಯುವ ಕ್ರಿಯೆಯಾಗಿದೆ ಇಲ್ಲಿ ವಿವೇಚಿಸಲಾದ ಅಂಶಗಳಿಂದ ಹುಡುಕುವಿಕೆಯು ಎರಡು ಪ್ರಕಾರದ್ದಾಗಿದ್ದು, ಒಂದು ಇದ್ದು ಕಣ್ಮರೆಯಾಗಿರುವ ಹಳೆಯದನ್ನು ಹುಡುಕುವುದು ಇದು ಭೂತಕಾಲಕ್ಕೆ ಸಂಬಂಧಿಸಿದ್ದು, ಡಿಸ್ಕವರಿ ‘ಅನ್ವೇಷನೆ’ ಎಂದೂ ಅದೇ ರೀತಿ ಇನ್ನೋಂದು ಪದ ಈವರೆಗೆ ಇಲ್ಲದ ಹೊಸದನ್ನು ಹುಡುಕುವುದು ಭವಿಷತ್‌ಕಾಲಕ್ಕೆ ಸಂಬಂಧಿಸಿದ್ದು, ‘ಆವಿಷ್ಕಾರಣ’ವೆಂಬ ಪದವನ್ನು ಬಳಸಬೇಕಾಗಿದೆ. ಇಂಗ್ಲೀಷ ಭಾಷೆಯಲ್ಲಿ ಈ ಪದಗಳು ಹೀಗೆ ನಿರ್ದಿಷ್ಟ ಅರ್ಥದಲ್ಲಿ ಬಳಕೆಯಾಗುತ್ತಿವೆ. ಆದರೆ ಕನ್ನಡದಲ್ಲಿ ಮಾತ್ರ ಈ ಎರಡನ್ನು ‘ಸಂಶೋಧನೆ’ ಎಂಬ ಪದದಿಂದ ಕರೆಯುವುದರಿಂದ ವಿಷಯ ಅಸ್ಪಷ್ಟವಾಗಿಯೇ ಉಳಿಯುತ್ತದೆ. ಹೀಗೆ ಡಿಸ್ಕವರ್ ಪ್ರಕಾರ ಹಾಗೂ ಇನ್‌ವೆನ್‌ಶನ್ ಪ್ರಕಾರದ ಹಿಂದೆ ರಿಸರ್ಚ ಇರುತ್ತದೆ. ಆದರೆ ಇವರೆಡರಂತೆ ರಿಸರ್ಚ ಎಂಬುದು ಒಂದು ಸಂಶೋಧನಾ ಪ್ರಕಾರವಲ್ಲದೆ, ಅವುಗಳ ಹಿಂದೆ ನಡೆಯುವ ಶೋಧ ಪ್ರಕ್ರಿಯೆಯಾಗಿದೆ. ಒಟ್ಟಾರೆಯಾಗಿ ‘ಅನ್ವೇಷಣಾತ್ಮಕ’ ಸಂಶೋಧನೆ ಮತ್ತು ಆವಿಷ್ಕರಣಾತ್ಮಕ ಸಂಶೋಧನೆಗಳು ಹಳೆಯದನ್ನು ಹೊಸದನ್ನು ಶೋಧಿಸುವುದಕ್ಕೆ ಶೋಧಿಸುವುದನ್ನು ಪರಿಷ್ಕರಿಸುವ ಮೂಲಕ ಜ್ಞಾನ ದಿಗಂತಗಳನ್ನು ವಿಸ್ತರಿಸುತ್ತಾ ಹೊರಟಿವೆ.

ಅನ್ವೇಷಣಾತ್ಮಕ ಸಂಶೋಧನೆಯಲ್ಲಿ ಆಕರಶೋಧನ ಮತ್ತು ಅನ್ವೇಷಣಾತ್ಮಕ ಸಂಶೋಧನೆ ಈ ಎರಡು ಹಂತಗಳಲ್ಲಿ ಪೂರ್ಣತೆಯನ್ನು ಪಡೆಯುತ್ತದೆ. ಆದರೆ ಈ ಎರಡು ಪ್ರಕ್ರಿಯೆಗಳಿಗೆ

‘ಸಂಶೋಧನೆ’ ಎಂಬ ಒಂದೇ ಪದವನ್ನು ಬಳಸುವುದು ತಪ್ಪು ಅಂದರೆ ಶಾಸನ, ಹಸ್ತಪ್ರತಿ ಇತ್ಯಾದಿಗಳನ್ನು ಹುಡುಕುದುದನ್ನು ಮತ್ತು ಅವುಗಳ ಕುರಿತಾದ ಆಳವಾದ ಅಧ್ಯಯನವನ್ನು ‘ಸಂಶೋಧನೆ’ ಎಂಬ ಒಂದೇ ಹೆಸರಿನಿಂದ ಕರೆಯಲಾಗುತ್ತಿದೆ. ಶಾಸನ ಹಸ್ತಪ್ರತಿಗಳನ್ನು ಹುಡುಕಿದ ಮಾತ್ರಕ್ಕೆ ಅದನ್ನು ‘ಅನ್ವೇಷಣಾತ್ಮಕ ಸಂಶೋಧನೆ’ ಎನ್ನಲು ಬರುವುದಿಲ್ಲ. ಇಲ್ಲಿ ಸಂಶೋಧನಾ ಪ್ರಕ್ರಿಯೆ ಪೂರ್ಣವಾಗಿ ನಡೆಯುವುದಿಲ್ಲ. ಸಹಾಯಕ ಸಂಶೋಧನೆ ಆಕರಗಳನ್ನು ಹುಡುಕುವುದು ಒಂದು ಆಕಸ್ಮಿಕ ಪ್ರಕ್ರಿಯೆಯಾದರಿಂದ ಅವರನ್ನು ಆಕರ ಶೋಧಕರೆಂದೂ ಹೀಗೇ ಶೋಧಿತ ಆಕರಗಳನ್ನು ಅವಲಂಬಿಸಿ ಶೋಧವನ್ನು ಮುಂದುರೆಸುವುದನ್ನು ಸಂಶೋಧಕರೆಂದು ಕರೆಯಬಹುದು.

ಇಂದು ಭಾರತದಂತಹ ಜಾತಿವಾದಿ ರಾಷ್ಟ್ರಗಳಲ್ಲಿ ಜಾತಿ–ಮತಗಳ ವಿಷಯವಾಗಿ ಮಾಡಿದ ಸಂಶೋಧನೆ ಅನೇಕ ಪ್ರತಿಭಟನೆಗಳಿಗೆ ಗುರಿಯಾಗುತ್ತದೆ. ವ್ಯಕ್ತಿ ವಿರೋಧ, ಸಾಮಾಜಿಕ ವಿರೋಧ, ಧಾರ್ಮಿಕ ವಿರೋಧ, ರಾಜಕೀಯ ವಿರೋಧಗಳನ್ನು ಸಂಶೋಧಕ ಎದುರಿಸಬೇಕಾಗಿ ಬರುವುದರಿಂದ ಈ ದೇಶದಲ್ಲಿ ಅವನು ಒಂದು ಬಗೆಯ ಸಂರಕ್ಷಣಾತ್ಮಕ ನಿಲುವಿನಲ್ಲಿಯೇ ತನ್ನ ಬರವಣಿಗೆಯನ್ನು ಮುಂದುವರೆಸುವ ಪರಿಸ್ಥಿತಿಯಿದೆ. ಇದನ್ನು ಲೆಕ್ಕಿಸದೆ ಆದರ ಸಾಮಗ್ರಿಯ ಆಧಾರದಲ್ಲಿ ಹೊರಹೊಮ್ಮಿದ ಶೋಧವನ್ನು ಪ್ರಕಟಿಸಿದರೆ ಡಾ.ಎಮ್.ಎಮ್.ಕಲಬುರ್ಗಿ ಡಾ.ಶಂಭಾ ಜೋಶಿ ಡಾ.ಡಿ.ಎಲ್.ಎನ್. ಪ್ರೊ. ಸ.ಸ.ಬಸವಾಳ ಮೊದಲಾದವರ ಮೇಲಾದ ಹಿಂಸೆಗಳನ್ನು ಅನುಭವಿಸಬೇಕಾಗುತ್ತದೆ. ಸಂಶೋಧಕನು ಸಾಮಾಜಿಕರನ್ನು ಎದುರಿಸುವ ಧೈರ್ಯ ಇಲ್ಲಿ ಪರಂಪರೆಯ ಬಗ್ಗೆ ಕುರುಡು ವ್ಯಾಮೋಹ ಬೆಳೆಸಿಕೊಂಡ ಮನಸ್ಸುಗಳಿಗೆ ಚುರುಕು ಮುಟ್ಟಿಸುವ ಶೋಧವನ್ನು ವಿದ್ವಾಂಸ ಧೈರ್ಯದಿಂದ ಪ್ರಕಟಿಸಬೇಕು. ಆಗ ಸಮಾಜದಲ್ಲಿ ಹೊಸ ಚಿಂತನೆ ವೈಜ್ಞಾನಿಕ ಮನೋಭಾವ ಹುಟ್ಟಲು ದಾರಿಗಳು ತೆರೆದುಕೊಳ್ಳುತ್ತವೆ. ಆದರೆ ಈ ನಿಲುವಿನಿಂದ ಸಂಶೋಧನೆಯನ್ನು ಪ್ರಕಟಿಸಿದ ಅವನ ಸುತ್ತ ಕೆಲವೊಮ್ಮೆ ಕ್ರೂರಹಿಂಸೆ ಒತ್ತಡ ಇತ್ಯಾದಿಗಳು ನಿರ್ಮಾಣವಾಗುತ್ತವೆ. ವೈಯುಕ್ತಿಕ ದ್ವೇಷದ ವ್ಯಕ್ತಿಗಳು ಸತ್ಯ ಸಂರಕ್ಷಣೆಯ ಸೋಗು ಹಾಕಿ ಅವನನ್ನು ಹಿಂಸಿಸುತ್ತಾರೆ. ಆಗ ಸಂಶೋಧಕ ತನ್ನ ಒಳದನಿಗೆ ಬದ್ಧನಾಗಬೇಕೋ ಹೊರಗಿನ ಒತ್ತಡಕ್ಕೆ ಮಣಿಯಬೇಕೋ ಎಂಬ ಉಭಯ ಸಂಕಟವನ್ನು ಅನುಭವಿಸಬೇಕಾಗುತ್ತದೆ. ಜಗತ್ತಿನ ಇತಿಹಾಸದಲ್ಲಿ ಅಧಿಕಾರಿಗಳು ಮತ್ತು ಧರ್ಮಾಧಿಕಾರಿಗಳು ಯಾವಾಗಲೂ ಸತ್ಯವನ್ನು ಹತ್ತಿಕ್ಕುತ್ತ ಸತ್ಯಾವಾದಿಗಳನ್ನು ದಂಡಿಸುತ್ತಾ ಬಂದಿದ್ದಾರೆ. ಉದಾ:ಸಾಕ್ರೆಟಿಸ್, ಹ್ಯಾಲಿ, ಕೊಪರ್ನಿಕಸ್, ಗೆಲಿಲಿಯೋ ಬಸವಣ್ಣ ಮೊದಲಾದವರನ್ನು ವಿಷ ನೀಡಿ, ಶಿಲುಬೆಗೇರಿಸಿ, ಗಡಿಪಾರು, ಶಿರಚ್ಛೇದನ ಜೀವಾವದಿ ಶಿಕ್ಷೆ ಜೀವಂತ ದಹನ, ಗ್ರಂಥ ದಹನ ಮೊದಲಾದ ಶಿಕ್ಷೆ ಸತ್ಯ ಶೋಧನೆಯ ಪ್ರಯತ್ನದ ಪರಿಣಾಮವೆನಿಸಿವೆ. ಕೆಲವೊಮ್ಮೆ ಸಣ್ಣಪುಟ್ಟ ಸಂಶೋಧನ ಲೇಖನಗಳನ್ನು ಪ್ರಕಟಿಸಿದ ಸಂದರ್ಭದಲ್ಲಿ ಕ್ರೂರ ಶಿಕ್ಷೆ ಇಲ್ಲದಿದ್ದರೂ ಕಿರಕುಳ ತಪ್ಪಿದ್ದಲ್ಲ.

ಇಂದು ಸಂಶೋಧನೆಯ ಕೇವಲ ವಿಶ್ವವಿದ್ಯಾಲಯಗಳು ನೀಡುವ ಪದವಿ ಹಾಗೂ ಉದ್ಯೋಗ ಗಿಟ್ಟಿಸಿಕೊಳ್ಳಲು ಬೇಕಾಗುವ ಮಾನದಂಡಗಳಾಗಿವೆ ಅಲ್ಲದೆ ಪದವಿ ಮತ್ತು ಉದ್ಯೋಗ ಪಡೆದ ನಂತರ ಸಂಶೋಧನೆಯಲ್ಲಿ ತೊಡಗಿಕೊಳ್ಳದೇ ನಿರಂತರ ಅಧ್ಯಯನದಲ್ಲಿ ತೊಡಗಿಕೊಳ್ಳದೇ ಇರುವುದು ಸಾಮಾನ್ಯವಾಗಿ ಕಂಡು ಬರತ್ತದೆ. ಇದರಿಂದ ‘ಖಡ್ಗ ಬಳಸಿದಷ್ಟು ಹರಿತವಾಗುವ ಬಳಸದಿದ್ದರೆ ಜಂಗು ಹಿಡಿಯುವ’ ರೀತಿ ಇಲ್ಲಿಯದ್ದಾಗಿದೆ. ನಿರಂತರ ಅಧ್ಯಯನ ಹಾಗೂ ಸಂಶೋಧನೆಯಿಂದ ಅನೇಕ ನೆಲೆಗಳು ಗೊತ್ತಾಗುವಂತೆ ಕ್ರಿಯಾಶೀಲತೆಯಿಂದಲೂ ಸಂಶೋಧನೆಯ ಹೊಸ ಹೊಸ ಒಳನೋಟಗಳು ಗೊತ್ತಾಗುತ್ತವೆ “ಅರಿತವನಿಗಿಂತ ನುರಿತವ ಶ್ರೇಷ್ಠ” ಎಂಬಂತೆ ನಿರಂತರ ಕ್ರಿಯಾಶೀಲತೆಯಿಂದಾಗಿ ಅವನು ಪಳಗುತ್ತಾನೆ ಆದರೆ ಇಂದು ಇಂತಹ ಕ್ರಿಯಾಶೀಲತೆ ಅನುಭವದ ಅಭಿವ್ಯಕ್ತಿಯ ಕೊರತೆ ಸಂಶೋಧನಾ ಕ್ಷೇತ್ರದಲ್ಲಿ ಎದ್ದು ಕಾಣುತ್ತಿದೆ.

ಕನ್ನಡ ಸಾಹಿತ್ಯದ ಸಂಶೋಧನೆಯಲ್ಲಿ ತೊಡಗಿದಾಗ ಆಕರಗಳ ಪ್ರಮಾಣಿಕತೆಯ ಕೊರತೆ ಕಂಡು ಬಂದರು ಕವಿಗಳ ಧಾರ್ಮಿಕ, ಮನಸ್ಸಿನಿಂದ ಇತಿಹಾಸ ಸಂಪ್ರದಾಯಗಳು ಗೌಣವಾಗಿ ಪುರಾಣ ಸಂಪ್ರದಾಯಗಳು ವಿಶೇಷತೆ ಪಡೆದಿದೆ. ನಾಯಕನ ವೈಭವಿಕರಣದ ಹೊರತು ಕೃತಿ ವಿಶ್ರುತತೆ ಪಡೆಯದು ಎಂಬ ನಿಲುವು ನಮ್ಮ ಸಾಹಿತ್ಯಲೋಕದಲ್ಲಿ ಉಳಿದುಕೊಂಡು ಬಂದಿದೆ ಅವು ಪುರಾಣ ಪುರುಷರ ಆದರ್ಶ ಜೀವನವನ್ನು ಚಿತ್ರಿಸಿದೆ ಹೊರತು ವಾಸ್ತವ ವ್ಯಕ್ತಿಗಳ ಬದುಕನ್ನು ಬರೆದಿಡಲಿಲ್ಲ. ಕನ್ನಡದ ಆದಿ ಕವಿ ಪಂಪ ಅರಿಕೇಸರಿಯಂತ ವಾಸ್ತವ ರಾಜನನ್ನು ನಾಯಕನೆಂದು ಇಟ್ಟು ಕೊಂಡರೂ ಪುರಾಣಪುರುಷ ಅರ್ಜುನನೊಂದಿಗೆ ಸಮೀಕರಿಸಿ ಇತಿಹಾಸ ಮತ್ತು ಚರಿತ್ರೆಯನ್ನು ಗೌಣಗೊಳಿಸಲಾಯಿತು. ಕನ್ನಡ ಸಾಹಿತ್ಯ ಚರಿತ್ರೆಯ ಮೊದಲಿಗರಾದ ಜೈನ ಕವಿಗಳ ಕಾವ್ಯಗಳಲ್ಲಿ ಇಂತಹ ಪುರಾಣಗಳೂ ಪೌರಾಣಿಕ ಇತಿಹಾಸಗಳೂ ಬೆಳದು ಬಂದು ಸಂಶೋಧನೆ ಬೇಕಾದ ಆಕರಗಳ ಪ್ರಮಾಣಿಕತೆ ಸಂದೇಹಕ್ಕೆ ಗುರಿಯಾಗಿವೆ. ಇನ್ನು ಜೈನೇತರ, ಶೈವ ಬ್ರಾಹ್ಮಣ ಬೌದ್ಧ ಕವಿಗಳು ಪವಾಡಗಳನ್ನು ಇತಿಹಾಸಕ್ಕೆ ತೊಡಕುಹಾಕಿ ನಿಜಾಂಶದ ಮೂಲ ಸ್ವರೂಪವನ್ನೇ ನಾಶಮಾಡಿದ್ದಾರೆ ಇದರಿಂದ ಇತಿಹಾಸ ಚರಿತ್ರೆಯ ಧೋರಣೆಗಳು ಈ ಕೃತಿಯಲ್ಲಿ ಕಡಿಮೆಯಾಗಿ ಪುರಾಣ ಪ್ರಜೆ ಪ್ರಧಾನವಾಗಿ ವಿಶ್ವಾಸಾರ್ಹ ಆಕರ ಸಾಮಗ್ರಿಗಳು ಸಾಹಿತ್ಯದ ಸಂಶೋಧನೆಯಲ್ಲಿ ತೊಡಗಿದಾಗ ಪ್ರಮಾಣಿಕತೆ ಕಡಿಮೆ ಎಂದೇ ಹೇಳಬೇಕು ಈ ಸಮಸ್ಯೆ ಶಿಷ್ಯ ಸಾಹಿತ್ಯದಲ್ಲಿ ಮಾತ್ರವಲ್ಲದೆ ಜನಪದ ಸಾಹಿತ್ಯದಲ್ಲೂ ಕಂಡುಬರುತ್ತದೆ. ಜನಪದ ಸಾಹಿತ್ಯ ಮೌಖಿಕ ಮೂಲದಿಂದ ಬೆಳೆದು ಬಂದಿದ್ದರಿಂದ ಇಲ್ಲಿ ಐತಿಹ್ಯಕರಣ ಹಾಗೂ ವದಂತಿಕರಣದಿಂದಾಗಿ ಆಕರಗಳ ಪ್ರಮಾಣಿಕತೆ ಪ್ರಶ್ನಾರ್ಹವಾಗಿ ಬಿಟ್ಟಿದೆ. ಅಷ್ಟೇ ಅಲ್ಲದೇ ಪಾಠಾಂತರ ರೂಪಾಂತರ ಭಾಷಿಕ ವ್ಯತ್ಯಾಸಗಳಿಂದಲೂ ಸಂಶೋಧನೆ ಮೂಲ ಆಕರಗಳು ವ್ಯತ್ಯಾಸಗೊಳುತ್ತ ಬಂದಿವೆ.

ಇನ್ನು ಸ್ಮಾರಕ ರೂಪದ ಆಕರಗಳಿಗೆ ಬಂದರೆ ಬಸದಿಗಳು ದೇವಾಲಯಗಳಾದವು. ದೇವಾಲಯಗಳು ಮಸೀದಿಗಳಾದವು ಇವುಗಳನ್ನು ಆಕರಗಳ ರೂಪದಲ್ಲಾದ ವ್ಯತ್ಯಾಸವೆಂದೇ ಹೇಳಬಹುದು. ವಿಜಯಪುರದ ನಾಗಚಂದ್ರ ಕಟ್ಟಿಸಿದ ಮಲ್ಲಿನಾಥ ಬಸದಿ ಬಹುಶಃ ಕರೀಮುದ್ದಿನ ಮಸೀದಿಯಾಗಿದೆ ಸವದತ್ತಿಯ ಪಾರ್ಶ್ವನಾಥ ಬಸದಿ ಯಲ್ಲಮ್ಮನ ದೇವಸ್ಥಾನವಾಗಿದೆ. ಪುಲಿಗೆರೆಯ ಸುರಹೊನ್ನೆ ಬಸದಿ ಸೋಮಶ್ವರ ದೇವಾಲಯವಾಗಿದೆ. ಹೀಗೆ ಕನ್ನಡ ಸಾಹಿತ್ಯದ ಸಂಶೋಧನೆ
ಆಕರಗಳು ಮೇಲ್ನೋಟಕ್ಕೆ ವಿಪುಲವಾಗಿದ್ದರು. ಅದರಲ್ಲಿ ಉಪಯೋಗಕ್ಕೆ ಬಾರದ ಸಾಮಗ್ರಿ ಹೆಚ್ಚಾಗಿದೆ. ಹೀಗೆ ಕನ್ನಡ ಸಾಹಿತ್ಯದಲ್ಲಿ ಆಕರಗಳ ಪ್ರಮಾಣವೂ ಕಡಿಮೆ ಪ್ರಮಾಣಿಕ ಆಕರವೂ ಕಡಿಮೆ ಎಂದು ಹೇಳಬಹುದು.

ಲಿಖಿತ ಸಾಮಗ್ರಿಗಳು ಶಿಲಾಶಾಸನಗಳು ಸಾರ್ವಜನಿಕ ದಾಖಲೆಗಳಾದರೆ ತಾಮ್ರ ಶಾಸನಗಳು ವೈಯಕ್ತಿಕ ದಾಖಲೆಗಳಾಗಿವೆ. ಶಿಲಾಶಾಸನಗಳು ಬಂಡೆಗಲ್ಲು, ಶಿಲಾಫಲಕ, ದೇವಾಲಯದ ಗೋಡೆ, ಕಂಬ, ವಿಗ್ರಹದ ಪಾದ ಪೀಠಗಳ ಮೇಲೆ ಕಂಡು ಬರುತ್ತವೆ. ಇವು ದೇವಾಲಯಗಳಲ್ಲಿ ವಿಶೇಷವಾಗಿ

ಕಂಡು ಬರುವದರಿಂದ ಕೆಲವು ವರ್ಗದ ಜನರಿಗೆ ಪ್ರವೇಶ ನಿರ್ಬಂಧದಿಂದ ಸಂಶೋಧಕರಿಗೆ ಸುಲಭವಾಗಿ ಆಕರಗಳು ಲಭ್ಯವಾಗುತ್ತಿಲ್ಲ. ವೈಯಕ್ತಿಕ ಲಿಖಿತ ದಾಖಲೆಗಳಾದ ತಾಮ್ರಶಾಸನಗಳು ದೇವಾಲಯಗಳ ಮಠಗಳ ಒಡೆಯರಲ್ಲಿ ದೇಶಮುಖರು–ಪಾಳೆಯಗಾರರು –ಗೌಡನ ಮನೆಯಲ್ಲಿ ಸಿಗುವುದರಿಂದ ಈ ದಾಖಲೆಗಳು ಸಂಶೋಧಕನಿಗೆ ಲಭ್ಯವಾಗುವುದು ಕಷ್ಟಸಾಧ್ಯವಾಗಿದೆ. ನಮ್ಮಲ್ಲಿ ಸಿಗುವ ವಿದೇಶಿ ಪ್ರವಾಸಿಗಳ ದಿನಚರಿ, ಕೈಪಿಯತ್ತು. ಬಖೈರುಗಳನ್ನು ನಂಬುವುದು ಕಷ್ಟ ಏಕೆಂದರೆ ಇತಿಹಾಸದ ಪ್ರಜ್ಞೆಯಿಲ್ಲದ ಸ್ಥಳೀಯ ಅನಕ್ಷರಸ್ಥರಿಂದ ಸಂಗ್ರಹಿಸಿದ ಬರವಣಿಗೆಗಳಿವು ಕೆಲವೊಮ್ಮೆ ಇತಿಹಾಸವನ್ನು ವೈಭವಿಕರಿಸುವ ಅಥವಾ ಪರಿವರ್ತಿಸುವ ಹಿನ್ನಲೆಯಲ್ಲಿ ಹುಟ್ಟಿದ ದಾಖಲೆಗಳಾಗಿವೆ. ಸಾಮನ್ಯವಾಗಿ ಗ್ರಾಮದ ಇತಿಹಾಸ, ಧರ್ಮಕ್ಷೇತ್ರ, ತೀರ್ಥಕ್ಷೇತ್ರಗಳ ಬಗ್ಗೆ ರಾಮಾಯಣ, ಮಹಾಭಾರತದ ಪೌರಾಣಿಕ ಹಿನ್ನಲೆಗಳ ಕಥೆಯನ್ನು ಕಟ್ಟುತ್ತಾರೆ. ಉದಾ:– ಹಂಪೆಯ ಇತಿಹಾಸಕ್ಕೆ ಋಷ್ಯಮೂಕ, ವಾಲಿ ಸುಗ್ರೀವ ಕಿಷ್ಕಿಂದೆ ಹೆಸರನ್ನೂ ಸವದತ್ತಿ ಎಲ್ಲಮ್ಮನ ಇತಿಹಾಸಕ್ಕೆ ರೇಣುಕೆ–ಜಮದಗ್ನಿ ಪರುಶರಾಮ ಮೊದಲಾದ ಪೌರಾಣಿಕ ಕಥೆಯನ್ನು ಇತಿಹಾಸದ ಮೇಲೆ ಹೇರುವ ಕಾರ್ಯವು ನಡೆದಿರುತ್ತವೆ.

ಮುದ್ರಿತ ಗ್ರಂಥ ಭಂಡಾರಗಳು ಹಸ್ತಪ್ರತಿ ಭಂಡಾರಗಳು ಪತ್ರಗಾರಗಳೂ ವಸ್ತು ಪ್ರದರ್ಶನಾಲಯಗಳು ಸಂಶೋಧನೆಗೆ ಹೆಚ್ಚು ಅನುಕೂಲವಾಗಿವೆ. ಆದರೆ ಶಿಲ್ಪ, ಜನಪದ ವಸ್ತು, ಹಸ್ತ ಪ್ರತಿಗಳನ್ನು ಸಂಗ್ರಹಿಸಲು ಆವರಣ ಹಾಗೂ ಅವುಗಳ ನಿರ್ದಿಷ್ಟ ನಿರ್ವಹಣೆ ಹೆಚ್ಚು ವೆಚ್ಚ ದಾಯಕವಾಗುವದರಿಂದ ಅಧ್ಯಯಕ್ಕೆ ಸುಲಭವಾಗಿ ದೊರೆಯುತ್ತಿಲ್ಲ. ಮುದ್ರಿತ ಗ್ರಂಥ ಭಂಡಾರಗಳ ಸಂಖ್ಯೆ ಇಂದು ವಿಶೇಷವಾಗಿದ್ದರೂ ಸಂಶೋಧನೆಗೆ ಅವಶ್ಯವಾದ ಪ್ರೌಢ ಗ್ರಂಥ ಭಂಡಾರಗಳ ಸಂಖ್ಯೆ ಕರ್ನಾಟಕದಲ್ಲಿ ಕಡಿಮೆಯೆಂದೆ ಹೇಳಬಹುದು ಮುದ್ರಿತ ಗ್ರಂಥ ಭಂಡಾರಗಳಿಗಿಂತ ಮಹತ್ವದಾದವು ಹಸ್ತಪ್ರತಿ ಭಂಡಾರಗಳು ಮತ್ತು ಪತ್ರಾಗಾರಗಳು. ಪುಸ್ತಕಗಳು ಕಡಿಮೆಯೆಂದರು ಸಾವಿರ ಪ್ರತಿಗಳು ಏಕಕಾಲಕ್ಕೆ ಮುದ್ರಣಗೊಳ್ಳುವದರಿಂದ ವಿವಿಧ ಗ್ರಂಥಾಲಯಗಳಲ್ಲಿ ಅದರ ಪ್ರತಿಗಳು ಸಿಗುತ್ತವೆ. ಆದರೆ ಪತ್ರಾಗಾರ ಹಸ್ತಪ್ರತಿ ಭಂಡಾರಗಳಲ್ಲಿ ಒಂದು ಹಸ್ತಪ್ರತಿಯು ಕೆಲವೇ ಕೆಲವು ಪ್ರತಿಗಳು ಸಿಗುವದರಿಂದ ಕೆಲವೊಮ್ಮೆ ಏಕೈಕ ಪ್ರತಿಗಳಿರುವುದರಿಂದ (ಉದಾ:– ಮುಡಬಿದಿರೆಯ ದವಳ, ಜಯದವಳ, ಮಹಾದವಳ, ಕೃತಿಗಳು) ಸಂಶೋಧಕರಿಗೆ ಅವು ಸುಲಭವಾಗಿ ಸಿಗುವದು ಸಾಧನವಾಗುವದಿಲ್ಲ.

ಕೆಲವೊಮ್ಮೆ ಒಂದೊಂದು ಗ್ರಂಥ ಭಂಡಾರಗಳಲ್ಲಿ ಕೆಲವು ವಿಶಿಷ್ಟ ವಿಷಯಗಳಿಗೆ ಸಂಬಂಧ ಪಟ್ಟ ಗ್ರಂಥಗಳು ಮಾತ್ರ ಸಂಗ್ರಹಗೊಂದಿದ್ದು ಕಂಡು ಬರುತ್ತದೆ. ಉದಾ:– ಪುಣೆಯ ಭಂಡಾರಕರ ರಿಸರ್ಚ್ ಇನ್‌ಸ್ಟಿಟ್ಯೂಟನಲ್ಲಿ ರಾಮಾಯಣ ಮಹಾಭಾರತಕ್ಕೆ ಸಂಬಂಧಿಸಿದ ಗ್ರಂಥಗಳೇ ವಿಪುಲವಾಗಿವೆ. ಪಾಂಡುಚೇರಿಯಲ್ಲಿ ಆಗಮಗ್ರಂಥಗಳು, ಕೆಲವು ಮತ ಧರ್ಮದ ಗ್ರಂಥಾಲಯಗಳಲ್ಲಿ ಕೇವಲ ಆಯಾ ಧರ್ಮಕ್ಕೆ ಸಂಬಂಧಿಸಿದ ಗ್ರಂಥಗಳು ಮಾತ್ರ ಸಂಗ್ರಹಗೊಂಡಿದ್ದು ಕಂಡುಬರುತ್ತದೆ. ಇದಕ್ಕೆ ಹೊರತಾಗಿ ಗ್ರಂಥಾಲಯಗಳು ಸಮಗ್ರ ಸಂಶೋಧನಾ ಸಾಮಗ್ರಿಗಳನ್ನು ಹೊಂದಿದ್ದರೆ. ಸಂಶೋಧಕರಿಗೆ ಇನ್ನು ಸುಲಭವಾಗುತ್ತದೆ. ಪ್ರಾಚೀನ ಹಸ್ತ ಪ್ರತಿಗಳನ್ನು ಸಂಗ್ರಹಿಸಿದ ಗ್ರಂಥ ಭಂಡಾರಗಳು ಹಸ್ತ ಸೂಚಿಯನ್ನು ಪ್ರಕಟಿಸುವದು ಅಗತ್ಯವಾಗಿದೆ ಒಂದು ಅಂದಾಜಿನಂತೆ ಈವರೆಗೆ ಕನ್ನಡದಲ್ಲಿಯ ೫೦ ಗ್ರಂಥಸೂಚಿಗಳು ೨ ಲೇಖನರೂಪದ ಸೂಚಿಗಳು ಪ್ರಕಟನಾದದ್ದು ಕಂಡು ಬರುತ್ತದೆ.

ಸಂಶೋಧಕರು ಸಂಶೋಧನೆ ತೊಡಗುವ ಮೊದಲು ತಾನು ಕೈಗೆತ್ತಿಗೊಂಡ ಸಮಸ್ಯೆ ಸಂಪ್ರಂಬಂಧ ಮಿತಿಯದೊ, ಮಹಾಪ್ರಬಂಧದಮಿತಿಯದೊ, ಎಂಬುದನ್ನು ಅರಿವುಕೊಳ್ಳಬೇಕು ಈ ವಿಷಯದ ಕುರಿತು ಈಗಾಗಲೇ ಸಂಶೋಧನೆ ನಡೆದಿದೆಯೋ ಇಲ್ಲವೊ ಎಂಬ ತಿಳುವಳಿಕೆ ಅಗತ್ಯವಾದುದು. ಈಗಾಗಲೇ ಸಂಶೋಧನೆಗಳು ನಡೆದ ಪಟ್ಟಿಯನ್ನು ವಿಶ್ವವಿದ್ಯಾಲಯಗಳು ಕಿರುಹೊತ್ತಿಗೆಯ ರೂಪದಲ್ಲಿ ವೆಬ್‌ಸೈಟ್‌ಗಳಲ್ಲಿ ಪ್ರಕಟಿಸಿದರೆ ಸಂಶೋಧಕರು ಹೊಸ ವಿಷಯಗಳ ಆಯ್ಕೆ ಮಾಡಿ ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಲು ಸುಲಭವಾಗುತ್ತದೆ. ಕೆಲವು ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿ ಪಡೆದ ಮರುದಿನವೇ ಪಿ.ಎಚ್‌ಡಿ ಅಧ್ಯಯನಕ್ಕೆ ತೊಡಗುತ್ತಾರೆ. ಇಂತಹ ಸಂದರ್ಭದಲ್ಲಿ ತಾನು ಬಿಡಿಸುವ ಸಮಸ್ಯೆಗೆ ಆಕರ ಸಾಮಗ್ರಿ ಲಭ್ಯಯೊ ಅಲಭ್ಯಯೊ ಎಂಬ ತಿಳುವಳಿಕೆಯಿಲ್ಲದೆ ಆಕರ ಕೊರತೆಯಿಂದ ಪಿಎಚ್‌ಡಿ ಅಧ್ಯಯನವನ್ನು ಅರ್ಧಕ್ಕೆ ನಿಲ್ಲಿಸುತ್ತಿದ್ದಾರೆ. ಅನೇಕ ಬಾರಿ ತಮ್ಮ ಆಸಕ್ತಿಗಳ ಪ್ರಜ್ಞೆಯಿಲ್ಲದೆ ವಿಷಯದ ಪೂರ್ವಜ್ಞಾನವಿಲ್ಲದೆ ಸಂಶೋಧನೆಗೆ ಹೆಸರು ನೊಂದಾಯಿಸುತ್ತಾರೆ. ಇದರಿಂದ ಸಂಶೋಧನೆ ಪೂರ್ಣಗೊಳ್ಳಲು ಸಾಧ್ಯವಾಗುವದಿಲ್ಲ. ಆದ್ದರಿಂದ ಮಾರ್ಗದರ್ಶಕರು ವಿಷಯ ಆಯ್ಕೆಯ ಸಂದರ್ಭದಲ್ಲಿ ಈ ಅಂಶವನ್ನು ವಿಶೇಷವಾಗಿ ಗಮನಿಸಬೇಕು ಸಂಶೋಧಕ ಮಾರ್ಗದರ್ಶಕರ ನಡುವೆ ಸಮನ್ವಯದ ಕೊರತೆಯಿಂದಲೂ ಅಧ್ಯಯನ ಪೂರ್ಣಗೊಳಿಸುವದು ಕಷ್ಟಕರ ಆದ್ದರಿಂದ ಸಂಶೋಧಕ ಉತ್ತಮ ವಿಷಯ ಮತ್ತು ಉತ್ತಮ ಮಾರ್ಗದರ್ಶಕರನ್ನು ಆಯ್ದುಕೊಂಡರೆ ವಿದ್ಯಾರ್ಥಿ ತನ್ನ ಕಾರ್ಯದಲ್ಲಿ ಅರ್ಧಗೆದ್ದಂತೆ.

ಸಂಶೋಧನೆಯನ್ನು ವೈಯಕ್ತಿಕ ಸಂಶೋಧನೆ, ಜಂಟಿ ಸಂಶೋಧನೆ ಸಾಂಸ್ಥಿಕ ಸಂಶೋಧನೆಯ ರೂಪದಲ್ಲಿ ನಡೆಸಲಾಗುತ್ತದೆ. ಒಬ್ಬ ಸಂಶೋಧಕ ತನ್ನ ಶಕ್ತಿ ಶ್ರಮ ಜ್ಞಾನವನ್ನು ಮೀರುವಂತಹ ಸಮಸ್ಯೆಯಾಗಿದ್ದರೆ ಮತ್ತೊಬ್ಬ ಸಂಶೋಧಕರ ಸಹಯೋಗದಲ್ಲಿ ಜಂಟಿ ಸಂಶೋಧನೆ ನಡೆಸಬಹುದು. ಇವು ವಿಜ್ಞಾನ, ಸಮಾಜ ವಿಜ್ಞಾನ ಕ್ಷೇತ್ರಗಳಲ್ಲಿ ಈ ಪ್ರಕಾರದ ಸಂಶೋಧನೆ ವಿಶೇಷವಾಗಿದೆ. ಆದರೆ ಒಬ್ಬರ ಶ್ರಮ, ಜ್ಞಾನಗಳನ್ನು ಇನ್ನೊಬ್ಬರು ಅನಾಯಾಸವಾಗಿ ಪಡೆಯುವ ಅಪಾಯದಿಂದ ವೈಮನಸ್ಸು ಹುಟ್ಟಿಕೊಳ್ಳುವ ಸಾಧ್ಯತೆ ಹೆಚ್ಚು. ಸಾಂಸ್ಥಿಕ ಸಂಶೋಧನೆಯಲ್ಲಿ ನಿರ್ದೇಶಕರು ಎಲ್ಲ ಭೌತಿಕ ಸಂಪನ್ಮೂಲಗಳನ್ನು ಮಾತ್ರ ಒದಗಿಸಿ ಪ್ರಧಾನ ಸಂಪಾದಕನೆಸಿಕೊಂಡು ದೈಹಿಕ ಮತ್ತು ಬೌದ್ಧಿಕ ಶ್ರಮಕ್ಕೆ ಇತರರನ್ನು ಬಳಸಿಕೊಂಡು ಅನಾಯಾಸವಾಗಿ ಸಂಪಾದಕನೆಂಬ ಹೆಸರು ಗಿಟ್ಟಿಸಿಕೊಳ್ಳುವ ತಂತ್ರಗಳು ಈ ಕ್ಷೇತ್ರದಲ್ಲಿ ರೂಢಿಗೆ ಬಂದಿವೆ.

ವಿಶೇಷ ತಜ್ಞತೆ (Specialization) ಒಂದು ಕ್ಷೇತ್ರದ ಸಂಶೋಧನೆಯ ಶಿಸ್ತಾಗಿ ಬೆಳೆಯುತ್ತಲಿದೆ. ಒಂದು ಕ್ಷೇತ್ರದಲ್ಲಿ ಮತ್ತೊಂದು ಶಾಖೆಯನ್ನು ಉಪಶಾಖೆಯನ್ನು ತಜ್ಞತೆಯ ವೃತ್ತವನ್ನಾಗಿಸಿಕೊಳ್ಳುತ್ತಿದ್ದಾರೆ. ಇದರಿಂದ ವಿವಿಧ ಜ್ಞಾನ ಶಾಖೆಗಳ ಅಂತರ್ ಶಿಸ್ತೀಯ ಅಧ್ಯಯನಯನ್ನು ಸಂಶೋಧಕನು ಬೆಳೆಸಿಕೊಂಡಾಗ ಅವನ ಸಂಶೋಧನೆಯ ಕ್ಷಿತಿಜ ವಿಸ್ತಾರವಾಗುತ್ತ ಹೋಗುತ್ತದೆ. ಹೀಗೆ ಶಾಖೆ ಉಪಶಾಖೆಗಳ ವಿಶೇಷ ತಜ್ಞತೆಗಿಂತ ಬಹುಜ್ಞತೆಯಿಂದ ಉತ್ತಮ ಸಂಶೋಧನೆ ಹೊರಹೊಮ್ಮಲು ಸಾಧ್ಯವಾಗುತ್ತದೆ.

ಹೀಗೆ ಸಮಾಜ ಪರಿವರ್ತನೆಗೆ ಸಂಶೋಧನೆ ನಡೆಸಬೇಕು. ಸಂಶೋಧನೆಯಿಂದ ಸಮಾಜದ ಜನರ ಚಿಂತನ ಕ್ರಮಬದಲಾಗಬೇಕು ಸೃಜನ ಸಾಹಿತ್ಯದಂತೆ ಸಮಾಜಕ್ಕೆ

ಅನ್ವಯವಾಗುವ ಸಂಶೋಧನೆಯಿಂದ ಸಾಮಾಜಿಕ ಜೀವನವನ್ನು ಬದಲಿಸಬಹುದು ಇಂತಹ ಸೃಜನ ಸಾಹಿತ್ಯದ ಕುರಿತು ನಡೆಯುವ ಸಂಶೋಧನಾ ಕಾರ್ಯದಲ್ಲಿ ಇಂದು ವಿಜ್ಞಾನದ ಪ್ರಗತಿಯಿಂದ ಗಣಕೀಕರಣ ಇವುಗಳೆಲ್ಲ ಬಂದರು ಸಂಶೋಧಕರನ್ನು ಹಲವು ಸವಾಲುಗಳನ್ನು ಈ ಕ್ಷೇತ್ರದಲ್ಲಿ ಎದುರಿಸುತ್ತಿದ್ದಾನೆ.

**ಆಧಾರ ಗ್ರಂಥಗಳು**

೧. ಸಂಶೋಧನೆ – ಡಾ. ಚಿದಾನಂದ ಮೂರ್ತಿ
೨. ಸಂಶೋಧನೆ ವಿಧಾನ –ಡಾ. ಹರಿಕೃಷ್ಣ ಭರಣ್ಯ
೩. ಸಂಶೋಧನೆ ಶಾಸ್ತ್ರ – ಹೊಸ್ಕೆರೆ ಶಿವಸ್ವಾಮಿ
೪. ಕನ್ನಡ ಮಧುಕೋಶ–ಸಿ.ಪಿ.ಕೆ
೫. ಕನ್ನಡ ಸಾಹಿತ್ಯ ಕೋಶ –ಪ್ರೊ. ರಾಜಪ್ಪ ದಳವಾಯಿ
೬. ಸಾಮಾಜಿಕ ಸಂಶೋಧನೆ –ಎಸ್.ರಾಜಶೇಖರ